

ಮತ್ತೆ ದಸರಾ ಉತ್ಸವ ಬಂದಿದೆ. ಕಾವೇರಿ ಜಲವಿವಾದದ ಕರಿನೆರಳು ಹರಡಿದ್ದರೂ ಮೈಸೂರು ಮತ್ತು ಸುತ್ತಮುತ್ತ ದಸರಾ ಉತ್ಸವದ ಸುಪ್ತ ಸಡಗರ ಹಾಗೆಯೇ ಗರಿಬಿಚ್ಚುತ್ತಿದೆ. ದೇಶ ವಿದೇಶಗಳಿಂದ ಜನರನ್ನು ತನ್ನತ್ತ ಸೆಳೆಯುತ್ತಿರುವ ಮೈಸೂರು, ಒಂದೆಡೆ ಪ್ರವಾಸಿಗರ ಅಚ್ಚುಮೆಚ್ಚಿನ ತಾಣವಾದಂತೆಯೇ, ಇನ್ನೊಂದೆಡೆ ಆಸ್ತಿಕರ ಬಹುದೊಡ್ಡ ಶ್ರದ್ಧಾಕೇಂದ್ರವಾಗಿ ಬೆಳೆದಿದೆ. ಕರ್ನಾಟಕದ ವಿವಿಧ ಜಿಲ್ಲೆಗಳಿಂದ ಅಲ್ಲದೆ ತಮಿಳುನಾಡು, ಕೇರಳ, ಆಂಧ್ರಪ್ರದೇಶ, ಮಹಾರಾಷ್ಟ್ರಗಳಿಂದಲೂ ಲಕ್ಷಾಂತರ ಸಂಖ್ಯೆಯ ಪ್ರವಾಸಿಗರು ಪ್ರತಿ ವರ್ಷ ಮೈಸೂರಿನತ್ತ ಹರಿದುಬರುತ್ತಾರೆ. ಹಾಗೆ ಮೈಸೂರಿನತ್ತ ಆಸ್ತಿಕರನ್ನು ಸೆಳೆಯುವ ಬಹುದೊಡ್ಡ ಕೇಂದ್ರವೆಂದರೆ ಚಾಮುಂಡಿ ಬೆಟ್ಟ ಮತ್ತು ಬೆಟ್ಟದ ಮೇಲೆ ನೆಲೆಸಿರುವ ನಾಡದೇವಿ ಚಾಮುಂಡೇಶ್ವರಿ. ಇತ್ತೀಚಿನ ವರ್ಷಗಳಲ್ಲಿ ಉತ್ತರ ಭಾರತದಿಂದಲೂ ಆಸ್ತಿಕರು ಚಾಮುಂಡಿ ಬೆಟ್ಟವನ್ನು ಹುಡುಕಿಕೊಂಡು ದೊಡ್ಡ ಸಂಖ್ಯೆಯಲ್ಲಿ ಬರುತ್ತಿದ್ದಾರೆ.

ಮೈಸೂರು ಎಂದೊಡನೆ ಚಾಮುಂಡಿಬೆಟ್ಟ ಮತ್ತು ಚಾಮುಂಡೇಶ್ವರಿ ನೆನಪಾಗಲೇಬೇಕು. ಚಾಮುಂಡೇಶ್ವರಿ ಆಸ್ತಿಕರ ಆರಾಧ್ಯ ದೇವತೆ. ದೇವಿಯ ನಾಮಸ್ಮರಣೆ ವರ್ಷಪೂರ್ತಿ ಇರುತ್ತದೆ. ಆದರೆ ದಸರೆಯ ಸಂಭ್ರಮದ ವೇಳೆ ಇದು ಹೆಚ್ಚು. ಚಾಮುಂಡಿಗೆ ಅಗ್ರಪೂಜೆ ಸಲ್ಲುವ ಮೂಲಕವೇ ದಸರಾ ಮಹೋತ್ಸವಕ್ಕೂ ಚಾಲನೆ ಸಿಗುವುದು ವಿಶೇಷ. ಇದು ಅನೂಚಾನವಾಗಿ ನಡೆದುಬಂದಿರುವ ಸಂಪ್ರದಾಯ. ಮೈಸೂರು ಸಂಸ್ಥಾನವನ್ನು ಆಳಿದ ಯದು ವಂಶದ ರಾಜರ ಅಧಿದೇವತೆ, ನಾಡಿನ ಜನರ ಅಭಿಮಾನದ ದೇವತೆ. ಮೈಸೂರಿಗೆ ಕಳಶಪ್ರಾಯ.

ಚಾಮುಂಡಿಬೆಟ್ಟವನ್ನು ದಕ್ಷಿಣ ಭಾರತದಲ್ಲೇ ಬಹುದೊಡ್ಡ ಪ್ರವಾಸಿ ಕೇಂದ್ರವಾಗಿ ಬೆಳೆಸಬೇಕು ಎನ್ನುವ ಕನಸು ಆಳುವವರದ್ದು. ಆ ನಿಟ್ಟಿನಲ್ಲಿ ಕಳೆದ ಹಲವಾರು ವರ್ಷಗಳಿಂದ ಪ್ರಯತ್ನಗಳು ನಡೆದೇ ಇವೆ. ಇತ್ತೀಚಿನ ದಿನಗಳಲ್ಲಿ ಈ ಪ್ರಯತ್ನಕ್ಕೆ ಹೆಚ್ಚಿನ ಬೆಂಬಲವೂ ವ್ಯಕ್ತವಾಗಿದೆ. ಅದಕ್ಕೆ ಕಾರಣ ಮೈಸೂರಿನವರೇ ಮುಖ್ಯಮಂತ್ರಿ ಆಗಿರುವುದು. ಆದರೆ ಚಾಮುಂಡಿ ಬೆಟ್ಟದ ಅಭಿವೃದ್ಧಿಯ ಕಲ್ಪನೆ ಹೇಗಿರಬೇಕು ಎನ್ನುವುದು ಮೈಸೂರಿನ ಜನರನ್ನು ಇಬ್ಬಣ ಮಾಡಿರುವುದೂ ಸುಳ್ಳಲ್ಲ. ಚಾಮುಂಡಿಬೆಟ್ಟ ಮತ್ತು ಸುತ್ತಮುತ್ತ ಮೂಲಸೌಲಭ್ಯಗಳನ್ನು ಆಧುನೀಕರಿಸಿದರೆ ಮೈಸೂರಿಗೆ ಪ್ರವಾಸಿಗರ ಸಂಖ್ಯೆ ಹೆಚ್ಚುತ್ತದೆ ಎನ್ನುವುದು ಒಂದು ವಾದ. ಚಾಮುಂಡಿಬೆಟ್ಟವನ್ನು ಅಭಿವೃದ್ಧಿಯ ಹೆಸರಿನಲ್ಲಿ ಕುಲಗೆಡಿಸುವ ಯತ್ನಕ್ಕೆ ಅವಕಾಶ ನೀಡುವುದಿಲ್ಲ ಎನ್ನುತ್ತದೆ ಇನ್ನೊಂದು ಗುಂಪು.

ಚಾಮುಂಡಿ ದೇವಾಲಯದ ಎದುರು ಸೆಲ್ಫಿಯಲ್ಲಿ ನಿರತರಾದ ಉತ್ತರ ಭಾರತದ ಯಾತ್ರಿಕರು